ಒ.ಎಸ್. ನಂ.96/2016
ಡಿಡಬ್ಲು-1

ದಿನಾಂಕ 19.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟಿ ಸವಾಲುಃ ವಾದಿ ಪರ ವಕೀಲರಿಂದ</u>

ವಾದಿ, 8 ನೆ ಪ್ರತಿವಾದಿ ಮತ್ತು ಖಾಸಿಮಸಾಬರವರು ಸ್ವಂತ ಅಣ್ಣತಮ್ಮಂದಿರು ಎಂದರೆ ನಿಜ. ನಾನು 10 ನೆ ತರಗತಿವರೆಗೆ ವ್ಯಾಸಂಗ ಮಾಡಿರುತ್ತೇನೆ. ನಬಿಸಾಬ, ಖಾಸಿಮಸಾಭ ದಾವಲಸಾಬರವರು ಸೈಯದ ಹುಸೇನರವರ ಮಕ್ಕಳು ಎಂದರೆ ನಿಜ. ಸರ್ವೆ ನಂ.37 ರಲ್ಲಿ 8-ಎಕರೆಯನ್ನು ಜಾನಪ್ಪರವರಿಗೆ ಅಡಮಾನ ಇಟ್ಟಿರುತ್ತಾರೆ ಎಂದರೆ ನಿಜ. ಸದರಿ ಅಡಮಾನ ಮಾಡುವಾಗ ದಾವಲಸಾಬ ಹಾಗೂ ನಬಿಸಾಬರವರ ಸಹಿ ಪಡೆದಿಲ್ಲ ಎಂದರೆ ನಿಜ. ಸರ್ವೆ ನಂ.37 ರಲ್ಲಿ ಒಂದು ಹಿಸ್ಸೆಯಲ್ಲಿ 21 ಎಕರೆ ಮತ್ತು ಇನ್ನೊಂದು ಹಿಸ್ಸೆಯಲ್ಲಿ 16 ಎಕರೆ ಜಮೀನು ಇರುತ್ತದೆ.

ನನ್ನ ತಾಯಿಯ ಹೆಸರು ಖಾಜಾಬಿ ಇದೆ. ನನ್ನ ತಾಯಿ ಖಾಜಾಬಿರವರು ಸೋಮು ನಾಯಕರವರಿಗೆ ಸರ್ವೆ ನಂ.37 ನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.37/ಅ ಒಟ್ಟು 13-ಎಕರೆ 39-ಗುಂಟೆಯಲ್ಲಿ 04-ಎಕರೆ, ಸರ್ವೆ ನಂ.37/3 ಒಟ್ಟು 16-ಎಕರೆ 02-ಗುಂಟೆಯಲ್ಲಿ 05-ಎಕರೆ 14-ಗುಂಟೆ, ಸರ್ವೆ ನಂ.37 ರಲ್ಲಿ ಒಟ್ಟು ಒಟ್ಟು 10-ಎಕರೆಯಲ್ಲಿ 31-ಗುಂಟೆ ಜಮೀನುಗಳನ್ನು ಸೋಮು ತಂದೆ ರಾಮು ನಾಯಕರವರಿಗೆ ನನ್ನ ತಾಯಿ ಮಾರಾಟ ಮಾಡಿರುತ್ತಾರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ವಾದಿ ಪರ ವಕೀಲರು ಡಿಡಬ್ಲು-1 ರವರ ಸಾಕ್ಷಿ ಪ್ರಮಾಣ ಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ನಿಪಿ-122 ರಲ್ಲಿರುವ ಸಾಕ್ಷಿದಾರರ ಕ್ರಮಾಂಕ ನಂ.5 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ ಆದರೆ ಸದರಿ ಸಹಿಯನ್ನು ಎಲ್ಲಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನಾವು ಒಟ್ಟು 07-ಜನ ಸಹೋದರರು ಇರುತ್ತೇವೆ. ಅವರ ಹೆಸರು ಸೈಯದ ಹುಸೇನಸಾಬ, ಮಹಿಬೂಬಸಾಬ, ಅಬ್ದುಲುಸಾಬ, ಸೋಪಿಸಾಬ, ಮಹ್ಮದ ಬಾಬಾಸಾಬ, ಮಹ್ಮದ ರಫಿಕ ಹಾಗೂ ನಾನು ರಾಜ ಅಹ್ಮದ. ನಿಪಿ-122 ರಲ್ಲಿ ಸೈಯದ ಹುಸೇನಸಾಬರವರನ್ನು ಹೊರತುಪಡಿಸಿ ಮಹಿಬೂಬಸಾಬ, ಅಬ್ದುಲುಸಾಬ, ಸೋಪಿಸಾಬ, ಮಹ್ಮದ ಬಾಬಾಸಾಬ, ಮಹ್ಮದ ರಫಿಕ ಹಾಗೂ ನಾನು

ಸಾಕ್ಷಿದಾರರಾಗಿ ಸಹಿ ಮಾಡಿರುತ್ತೇವೆ ಎಂದರೆ ನಿಜ.

ನನ್ನ ತಂದೆ ಹಾಗೂ ನಬಿಸಾಬ ಮತ್ತು ದಾವಲಸಾಬರವರ ನಡುವೆ ದಾವಾ ಆಸ್ತಿಗಳಲ್ಲಿ ಪಾಲು ಆಗಿದೆ ಎಂದರೆ ಸರಿಯಲ್ಲ. ನಮ್ಮ ಪಾಲಿಗೆ ಬಂದ ಆಸ್ತಿಗಳನ್ನು ನನ್ನ ತಾಯಿ ಖಾಜಾಬಿರವರು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂ.37/ಅ ರಲ್ಲಿ ಒಟ್ಟು 4-ಎಕರೆ 26-ಗುಂಟೆಯಲ್ಲಿ 03-ಎಕರೆ 28-ಗುಂಟೆಯನ್ನು ಮತ್ತು ಸರ್ವೆ ನಂ.37/3 ರಲ್ಲಿ ಒಟ್ಟು 05-ಎಕರೆ 14-ಗುಂಟೆಯಲ್ಲಿ 38-ಗುಂಟೆ ಜಮೀನನ್ನು ನನ್ನ ದಾಲಸಾಬರವರು ಲಕ್ಷ್ಮಣ ತಂದೆ ದೇಸು ನಾಯಕರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ಮಾರಾಟ ಮಾಡಿದ ಜಮೀನಿನಾದ ನಿಪಿ-122 ಪ್ರಕಾರ ಸರ್ವೆ ನಂ.37/3 ರಲ್ಲಿ ಪಶ್ಚಿಮ ಭಾಗಕ್ಕೆ ದಾವಲಸಾಬರವರ ಜಮೀನು ಎಂದು ಚೆಕಬಂದಿಯಲ್ಲಿ ತೋರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ದಿನಾಂಕ 10.04.2008 ರಂದು ನನ್ನ ತಾಯಿ ಖಾಜಾಬಿ, ನಾನು ಹಾಗೂ ನನ್ನ ಉಳಿದ ಸಹೋದರರು ಜೇವರ್ಗಿಯ ಉಪ ನೊಂದಣಿ ಕಚೇರಿಗೆ ಬಂದಿರುತ್ತೇವೆ ಎಂದರೆ ಸರಿಯಲ್ಲ.

ದಾವಲಸಾಬ, ನಬಿಸಾಬರವರು ತಮಗೆ ಪಾಲಿಗೆ ಬಂದ ಜಮೀನಿನಲ್ಲಿ ಸಾಗುವಳಿ ಮಾಡುತ್ತಾ ಕಬ್ಜಾ ಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಸರ್ವೆ ನಂ.37 ಒಟ್ಟು 39-ಎಕರೆ 39-ಗುಂಟೆ ಇತ್ತು ಎಂದರೆ ನಿಜ. ಸದರಿ ಜಮೀನಿನಲ್ಲಿ ನನ್ನ ತಂದೆಯು 08-ಎಕರೆ ಜಮೀನನ್ನು ಜಾನಪ್ಪಗೌಡರವರಿಗೆ ಅಡಮಾನ ಮಾಡಿರುತ್ತಾರೆ ಎಂದರೆ ನಿಜ. ಸದರಿ ಅಡಮಾನ ಮಾಡಿದ ಜಮೀನು ವಾದಿ ಹಾಗೂ ಪ್ರತಿವಾದಿಯರಿಗೆ ಸಂಬಂಧಿಸಿರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ 1993 ನೆ ಸಾಲಿನಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆಯ ಮರಣಾನಂತರ ಖಾಜಾಬಿ, ದಾವಲಸಾಬ, ನಬಿಸಾಬರವರ ಹೆಸರಿನಲ್ಲಿ ನಿಪಿ-15 ರಂತೆ ಮುಟೇಷನ ಆಗಿರುತ್ತದೆ ಎಂದರೆ ಸರಿಯಲ್ಲ.

ನನ್ನ ತಂದೆ ಖಾಸಿಮುಸಾಬರವರು ಅಸಲು ದಾವೆ ನಂ.60/1984 ನ್ನು

ದಾವಲಸಾಬ, ನಬಿಸಾಬ, ಗುರುಲಿಂಗಪ್ಪ, ಬಸವಣ್ಣಪ್ಪರವರ ವಿರುದ್ದ ದಾವೆ ಸಲ್ಲಿಸಿರುತ್ತಾರೆ ಎಂದರೆ ನಿಜ. ನನ್ನ ತಂದೆ ಸದರಿ ದಾವೆ Declaration and injunction ಸಲ್ಲಿಸಿರುತ್ತಾರೆ ಎಂದರೆ ನಿಜ. ಸದರಿ ದಾವೆಯಲ್ಲಿ ದಾವಲಸಾಬ, ನಬಿಸಾಬ, ಗುರುಲಿಂಗಪ್ಪ, ಬಸವಣ್ಣಪ್ಪರವರು ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ ಎಂದರೆ ನಿಜ. ಸದರಿ ಪ್ರತಿವಾದ ಪತ್ರದಲ್ಲಿ ನನ್ನ ತಂದೆ ಸದರಿ ದಾವಾ ಸ್ವತ್ತುಗಳಿಗೆ ಮಾಲಿಕರಲ್ಲ ಮತ್ತು ಸ್ವಾಧೀನತೆ ಹೊಂದಿರುವುದಿಲ್ಲ ಎಂದು ಪ್ರತಿವಾದ ಪತ್ರ ಸಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾವೆಯು ನನ್ನ ತಂದೆ ನಡೆಸದೆ ಇರುವ ಕಾರಣ ದಾವೆ ವಜಾ ಆಗಿರುತ್ತದೆ ಎಂದರೆ ನಿಜ. ಸದರಿ ದಾವೆಯ ನಂತರ ನನ್ನ ತಂದೆ ದಾವಲಸಾಬ ಮತ್ತು ನಬಿಸಾಬರವರಿಗೆ ಪಾಲು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಸರ್ವೆ ನಂ.37 ರ ಪಹಣಿಯನ್ನು ನೋಡಿರುತ್ತೇನೆ. ಸದರಿ ಪಹಣಿಯಲ್ಲಿರುವ ಹೆಸರುಗಳನ್ನು ನಾನು ನೋಡಿ ತಿಳಿದುಕೊಂಡಿರುತ್ತೇನೆ. ಸದರಿ ಪಹಣಿಯಲ್ಲಿರುವ ಹೆಸರಿನ ಕುರಿತು ನಾನಾಗಲಿ ನನ್ನ ತಾಯಿಯಾಗಲಿ ಹಾಗೂ ನನ್ನ ಸಹೋದರರಾಗಿ ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಎಂದರೆ ನಿಜ.

**ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಸಿವಿಲ್ ನ್ಯಾಯಾಧೀಶರು
ಜೇವರ್ಗಿ